Sri VEERENDRA PATIL.—It is not the case with only Gokak Taluk. There are so many Taluks in which so many villages are not connected with good roads. Thousands and thousands of villages are there which are not connected with good roads.

Site for Harijan Colony at Raichur

*Q.—601. Smt. NAGAMMA (Kalmala).—

Will the Minister for Municipal Administration be pleased to state :—

(*a*) whether it is not a fact that a representation was made to Raichur Town Municipality five years back requesting to grant site for the Harijan Colony ;

(*b*) the reason for not giving possession of the site so far though the amount was remitted in that behalf ?

A.—Sri R. M. PATIL (Minister for Municipal Administration).—

(*a*) Yes, it is.

(*b*) Out of 38 applicants only 13 have paid the amount due from them.

ಶ್ರೀಮತಿ ನಾಗಮ್ಮ.—ನಾನು ಉಪ ಪ್ರಶ್ನೆಗಳನ್ನು ಹಾಕಲು ಇಷ್ಟಪಡುವುದಿಲ್ಲ.

Power Development in Krishna Basin

*Q.—626. Sri H. M. CHANNABASAPPA (Periyapatna).—

Will the Minister for Public Works be pleased to state :—

(*a*) whether they are aware of the possibilities of power development in the State in Krishna Basin at Bidari, Hunikunti and Jaladurga ;

(*b*) if so, the power potential of each ;

(*c*) whether the State Government have examined the impact of constructing of Sri sailam and Nagarjunasagar Projects as proposed on the prospects of power generation at these places ;

(*d*) if so, what are those impacts ;

(*e*) if they have not examined, the reasons for not doing so ?

A.—Sri VEERENDRA PATIL (Minister for Public Works).—

(*a*) Yes.

(SRI VEERENDRA PATIL)

(*b*) The power development will be at Almatti and Narayanapura Dam Sites as well as at Jaladurga Falls and not at Bidari and Hunikunti Dam Sites.

The approximate power potential is :—

35,000 Kws. at Alamatti Dam.

20,000 Kws. at Narayanapur and

60,000 Kws. at Jaladurga Falls.

(*c*) Yes.

(*d*) The power generation referred to above will not be affected by construction of Nagarjunasagar and Sri-Sailam Project.

(*e*) Does not arise, in view of answer to (*c*) and (*d*).

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ನಾಗಾರ್ಜುನ ಸಾಗರ ಮತ್ತು ಶ್ರೀಶೈಲಂ ಯೋಜನೆಗಳ ನಿರ್ಮಾಣದಿಂದ ಆಲಮಟ್ಟಿ, ನಾರಾಯಣಪುರ ಮತ್ತು ಜಲದುರ್ಗದ ಬಳಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯಕ್ಕೆ ಧಕ್ಕೆಯುಂಟಾಗುವುದಿಲ್ಲವೆಂದು ಹೇಳಿದ್ದೀರಿ. ನಾಗಾರ್ಜುನ ಸಾಗರದ ಎರಡನೆಯ ಹಂತ ಕಟ್ಟಿದರೆ ಈ ಮೇಲಿನ ಅಣೆಕಟ್ಟುಗಳ ಬಳಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುವುದಿಲ್ಲವೆ ? ಎರಡನೆಯ ಹಂತವನ್ನು ಕಟ್ಟಿದರೆ ಲೀಗಲ್ ಅಕ್ಷನ್ ತೆಗೆದುಕೊಳ್ಳುತ್ತೇವೆಂದು ಮಹಾರಾಷ್ಟ್ರದವರು ಆಂಧ್ರದವರಿಗೆ ಹೇಳಿದ್ದಾರೆ. ಅದೇರೀತಿ ನೀವು ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಹಾರಾಷ್ಟ್ರದವರು ಆಂಧ್ರದವರ ಮೇಲೆ ಲೀಗಲ್ ಅಕ್ಷನ್ ತೆಗೆದುಕೊಳ್ಳುವ ವಿಚಾರವನ್ನು ಪೇಪರ್‌ನಲ್ಲಿ ಓದಿದ್ದೇನೆ. ಈ ಬಗ್ಗೆ ಲೀಗಲ್ ಅಕ್ಷನ್ ತೆಗೆದುಕೊಳ್ಳಬೇಕೇ ಅಥವಾ ಮತ್ತೆ ಯಾವುದಾದರೂ ಅಕ್ಷನ್ ತೆಗೆದುಕೊಳ್ಳಬೇಕೇ ಎಂಬುದು ನಮ್ಮ ಸರ್ಕಾರದ ತೀಪ್ರುಪರಿಶೀಲನೆಯಲ್ಲಿದೆ. ಯೋಗ್ಯವಾದ ನಿರ್ಣಯ ತೆಗೆದುಕೊಂಡ ಮೇಲೆ ಈ ಸಭೆಗೆ ತಿಳಿಸುತ್ತೇನೆಂದು ಈಗಾಗಲೇ ಸಭೆಗೆ ಹೇಳಿದ್ದೇನೆ. ಇಲ್ಲಿ ಕೇಳಿರುವ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ. ನಾಗಾರ್ಜುನ ಸಾಗರದ ಎರಡನೆಯ ಹಂತ ಮುಗಿದು ವಿದ್ಯುತ್ ಉತ್ಪಾದನೆ ಪ್ರಾರಂಭವಾದ ಮೇಲೂ ಸಹ ನಮಗೇನೂ ತೊಂದರೆಯಾಗುವುದಿಲ್ಲ. ಏತಕ್ಕೆಂದರೆ ನಾವು ಮೇಲಿನ ರಿಚ್‌ನಲ್ಲಿದ್ದೇವೆ. ಅಪ್ಪರ್‌ಕೃಷ್ಣಾ ಯೋಜನೆಯಾದ ಮೇಲೆ ನೀರು ಚಾನರ್ ಮೂಲಕ ಬರುವುದರಿಂದ ಆಲಮಟ್ಟಿ, ನಾರಾಯಣಪುರ ಅಣೆಕಟ್ಟುಗಳ ಬಳಿ ಮತ್ತು ಜಲದುರ್ಗ ಜಲಪಾತದ ಬಳಿ ವಿದ್ಯುತ್ ಉತ್ಪಾದನೆ ಯಾಗುತ್ತದೆ. ವಿದ್ಯುತ್ ಉತ್ಪಾದನಾ ಸಲುವಾಗಿಯೇ ನಾವು ಪ್ರಾಜೆಕ್ಟ್ ಕಟ್ಟಿಸುವುದಿಲ್ಲ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿಸಿದ ಮೇಲೆ ಅವುಗಳ ಡ್ಯಾಮ್ ಸೈಟಿನಲ್ಲಿ ಸ್ವಲ್ಪ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಶಿವಪ್ಪ.—ನಾಗಾರ್ಜುನಸಾಗರದ ಎರಡನೇ ಹಂತವನ್ನು ಒಪ್ಪಿಕೊಂಡರು ಎನ್ನುವ ಪ್ರಶ್ನೆ ಇದರಲ್ಲಿಲ್ಲ. ನಾಗಾರ್ಜುನಸಾಗರ ಹಾಗೂ ಶ್ರೀಶೈಲಂ ಪ್ರಾಜೆಕ್ಟ್‌ಗಳನ್ನು ಆಂಧ್ರದವರು ಮಾಡಿದರೂ ನಮ್ಮಲ್ಲ ಪವರ್ ಜನರೇಟ್ ಮಾಡಲು ಅನಾನುಕೂಲವಾಗುವುದಿಲ್ಲ ಎಂದು ಹೇಳಿದಿರಿ. ಈ ನಾಗಾರ್ಜುನ ಸಾಗರವನ್ನು ಎರಡನೇ ಹಂತದಲ್ಲಿ ಒಪ್ಪಿಕೊಳ್ಳದೇ ಇದ್ದರೆ ಎಷ್ಟು ಟಿ.ಎಂ.ಸಿ. ಎಫ್. ಟಿ. ನೀರು ಅಪ್ಪರ್‌ಕೃಷ್ಣಾ ಯೋಜನೆ ತೆಗೆದುಕೊಂಡರೆ ನಿಗುತ್ತದೆ ಎನ್ನುವ ಬಗ್ಗೆ ರೀಸರ್ಚ್ ಏನಾದರೂ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ. ಸುಮ್ಮನೆ ಇಲ್ಲದ್ದನ್ನು ನನ್ನ ಬಾಯಲ್ಲಿ ಹೊರಗೆಡಹಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಪ್ರಯತ್ನ ಮಾಡುತ್ತಿದಾರೆಂದು ಕಾಣುತ್ತದೆ. ನಾಗಾರ್ಜುನ ಸಾಗರದ ಎರಡನೇ ಹಂತಕ್ಕೆ ನಾವು ಇನ್ನೂ ಒಪ್ಪಿಲ್ಲ. ಇಲ್ಲ ಯಾವ ಯಾವ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬಹುದು ಎನ್ನುವುದರ ಪರಿಶೀಲನೆಯನ್ನು ಮಾಡುತ್ತಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—Committee on Plan Projects ಎನ್ನುವುದರ ರಿಪೋರ್ಟಿನಲ್ಲಿ ಪುಟ 21 ರಲ್ಲಿ ಈ ರೀತಿ ಪವರು ಬರುತ್ತದೆ ಎಂದು ಹೇಳಿದ್ದಾರೆ. ಇದರಂತೆ ಜಲದುರ್ಗದಲ್ಲಿ 2,80,000 ಕಿಲೋವಾಟುಗಳು, ಹುಣಸಕುಂಟೆಯಲ್ಲಿ 82,000 ಕಿಲೋವಾಟುಗಳಷ್ಟು, ಬದರಿಯಲ್ಲಿ 72 ಸಾವಿರ ಕಿಲೋವಾಟುಗಳು, ಹೀಗೆ ಒಟ್ಟು 4,34,000 ಕಿ.ವಾ. ಪವರು ತೆಗೆದು ಕೊಳ್ಳಲು ಮೈಸೂರಿಗೆ ಅವಕಾಶವಿದೆ ಎಂದು ಹೇಳಿದ್ದಾರೆ. ಈ ಕಮಿಟಿಯನ್ನು ಕೇಂದ್ರ ಸರ್ಕಾರ ದವರು ಮಾಡಿದ್ದು. ಇದರ ಪ್ರಕಾರ ಎಷ್ಟರಗಳನ್ನು ಮೈಸೂರು ಸರಕಾರದಲ್ಲಿ ಕೇಳಿದುದಕ್ಕೆ ಕೇವಲ 1,15,000 ಕಿಲೋವಾಟುಗಳು ಮಾತ್ರ ಬರುತ್ತದೆ ಎಂದು ಉತ್ತರ ಕೊಟ್ಟಿದ್ದೀರಿ, ಇನ್ನು ಉಳಿಕೆ ಯಾದ 3,19,000 ಕಿಲೋವಾಟುಗಳನ್ನು ಹೇಗೆ ಪಡೆದುಕೊಳ್ಳಬೇಕೆಂದು ಯೋಚಿಸಿದ್ದೀರಿ ಅಥವಾ ಇದನ್ನು ಪಡೆಯಬೇಕೆಂದು ಇದ್ದಾರೋ ಇಲ್ಲವೋ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗಲೇ ಯಾವ ಯಾವ ಪ್ರಾಜೆಕ್ಟ್‌ಗಳು ಇದರಲ್ಲಿ ಬರುತ್ತವೆ ಮತ್ತು ಎಲ್ಲೆಲ್ಲಿ ಸೈಟುಗಳು ಬರುತ್ತದೆ ಎಷ್ಟು ಉತ್ಪಾದನೆ ಮಾಡಲು ಸಾಧ್ಯ ಎನ್ನುವುದನ್ನೆಲ್ಲಾ ಪರಿ ಶೀಲನೆ ಮಾಡಬೇಕಾಗಿದೆ ಎಂಬುದಾಗಿ ಹೇಳಿದ್ದೇನೆ. ಇದರಲ್ಲಿ ಎಕನಾಮಿಕರ್ ಆಗಿ ಯಾವುದು ಪೊದಲು ಮಾಡಲು ಸಾಧ್ಯ ಅದರ ಸೈಟುಗಳನ್ನು ಮೊದಲಿಗೆ ತೆಗೆದುಕೊಂಡು ಅಲ್ಲಿ ಕೆಲಸಗಳನ್ನು ಮಾಡಲು ಪ್ರಯತ್ನ ಮಾಡುತ್ತೇವೆ. ನೀರು ಕೆಳಗೆ ಹರಿದು ಹೋಗುವಾಗ ಅದರಿಂದ ನಾವು ಯಾವಾಗ ರಾದರೂ ಪವರನ್ನು ಪಡೆಯಲು ಅವಕಾಶವಿದೆ. ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನ ಮಾಡುವಾಗಲೇ ಎಲ್ಲೆಲ್ಲಿ ನೀರು ಉಪಯೋಗಿಸಬಹುದು ಅದನ್ನು ಇತ್ಯರ್ಥ ಮಾಡಬೇಕೆಂದು 1954ರಲ್ಲೇ ಸೆಂಟ್ರಲ್ ಪವರ್ ಅಂಡ್ ವಾಟರ್ ಕಮಿಷನ್‌ನವರು ಒಂದು ಸರ್ವೇ ಮಾಡಿ ಎಲ್ಲೆಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳು ಆಗಬಹುದು ಎಲ್ಲಿ ಇರಿಗೇಷನ್ ಪ್ರಾಜೆಕ್ಟ್‌ಗಳು ಆಗಬಹುದು ಅವನ್ನೆಲ್ಲಾ ವಿಚಾರ ಮಾಡಿ ಆ ನಂತರ ನಾಗಾರ್ಜುನ ಸಾಗರದ ಎರಡನೇ ಹಂತವನ್ನು ಒಪ್ಪಬೇಕೇ ಬೇಡವೇ ಎನ್ನುವುದನ್ನು ತಿಳಿಸಬೇಕಾಗಿದೆ. ಯಾವಾಗಲೂ ಟರ್ಬೈನ್ ಮೂಲಕ ಪವರನ್ನು ಉತ್ಪಾದನೆ ಮಾಡುವಾಗ ಪವರನ್ನು ನಾವು ಯಾವಾಗ ಬೇಕಾದರೂ ಜನರೇಟ್ ಮಾಡಿಕೊಳ್ಳಬಹುದು.

ಶ್ರೀ ಎಸ್. ಶಿವಪ್ಪ.—ಆಂಧ್ರ ಸರಕಾರಕ್ಕೆ ಮಹಾರಾಷ್ಟ್ರ ಸರಕಾರ ಪ್ರತಿಭಟನೆ ಮಾಡುತ್ತಾ ನಾಗಾರ್ಜುನ ಸಾಗರದ ಎರಡನೇ ಹಂತಕ್ಕೆ ಅವಕಾಶ ಕೊಡಕೂಡದು ಮತ್ತು ಯಾವ ಯೋಜನೆ ಗಳನ್ನೂ ಇಲ್ಲಿ ಮಾಡಕೂಡದು ಎಂದು ಮಹಾರಾಷ್ಟ್ರ ಸರಕಾರ ಉಗ್ರವಾದ ಕ್ರಮ ತೆಗೆದುಕೊಂಡಂತೆ ನಮ್ಮ ಸರಕಾರವೇನಾದರೂ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಲು ಏನಾದರೂ ಪ್ರಯತ್ನ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರ ಬಗ್ಗೆ ನಾನಾಗಲೇ ಹೇಳಿದೆ. ಈಗಾಗಲೇ ಇದರ ಪರಿಶೀಲನೆ ಮಾಡುತ್ತಿದ್ದೇವೆ. ಇದು ಅಷ್ಟು ಸುಲಭವಾದ ಪ್ರಶ್ನೆಯಲ್ಲ. ತೀವ್ರವಾಗಿ ವಿಚಾರ ಮಾಡ ಬೇಕಾಗುತ್ತದೆ. ಕಾನೂನು ರೀತಿಯಿಂದ ಯಾವ ರೀತಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳ ಬಹುದು ಇವೆಲ್ಲಾ ವಿಚಾರಗಳನ್ನೂ ಸರಕಾರ ಪರಿಶೀಲನೆ ಮಾಡಬೇಕು. ಬಹುಶಃ ಇನ್ನು ಎರಡು ಮೂರು ದಿನಗಳಲ್ಲೇ ಇದರ ಬಗ್ಗೆ ಸರಕಾರದ ನಿರ್ದಿಷ್ಟ ನಿಲುವು ಏನು ಎನ್ನುವುದನ್ನು ಈ ಸಭೆಯ ಮುಂದೆ ಬಂದು ತಿಳಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಕೃಷ್ಣಾ ಬೇಸಿನ್‌ನಲ್ಲಿ ಅಪ್ಪರ್ ಕೃಷ್ಣಾ ಯೋಜನೆ ಬಿಟ್ಟರೆ ಬೇರೆ ಯಾವುದಾದರೂ ಯೋಜನೆಗಳನ್ನು ಮಾಡಬೇಕೆಂದು ಇದ್ದೀರಾ ಅಥವಾ ನಾಲ್ಕನೇ ಯೋಜನೆಯಲ್ಲ ಯಾವುದಾದರೂ ಪ್ರಾಜೆಕ್ಟ್ ಮಾಡುತ್ತೀರಾ ? ಹಾಗಿದ್ದರೆ ಅದರ ವೆಚ್ಚವೇನು ? ಇಲ್ಲವೇ ನಾಲ್ಕನೇ ಯೋಜನೆಯಲ್ಲಿ ಇನ್ನಾವ ಪ್ರಪೋಸಲ್‌ನಂತೆ ಕೆಲಸ ತೆಗೆದುಕೊಳ್ಳಬೇಕೆಂದಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಕೃಷ್ಣಾ ಬೇಸಿನ್‌ನಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟುಗಳ ಬಗ್ಗೆ ವಿಚಾರ ಮಾಡಿಲ್ಲ. ಸರಕಾರಕ್ಕೆ ಇದರಲ್ಲಿ ಹೆಚ್ಚು ಎಕನಾಮಿಕ್ ಆಗಿರುವ ಕೆಲವು ಯೋಜನೆಗಳು ಎಂದರೆ, ಕಾಳೀನದಿ ಯೋಜನೆ, ವರಾಹಿ, ಬಡ್ತಿ ಇದು ಬಹಳ ಚೀಪ್ ಆಗಿ ವರ್ಕ್‌ಔಟು ಆಗುವುದರಿಂದ ಇವನ್ನು ತೆಗೆದುಕೊಳ್ಳಬೇಕೆಂದು ಪರಿಶೀಲಿಸುತ್ತಿದ್ದೇವೆ ಮತ್ತು ಹೆಚ್ಚು ವೆಚ್ಚದ ಯೋಜನೆಗಳನ್ನು ಇಲ್ಲಿ ಕೈಕೊಳ್ಳುವ ಹಾಗಿಲ್ಲ. ಯಾವಾಗಲೂ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳವಾಗ ಅದರ ಕೆಳಗೆ ಬರುವ ನೀರಿನಿಂದ ಎಷ್ಟು ಪವರ್ ಜನರೇಟ್ ಮಾಡಬಹುದು ಅವನ್ನು ಯೋಚಿಸಿ ಮಾಡಬೇಕೆಂದು ಇದೆ. ಇದಕ್ಕಾಗಿಯೇ ಈಗ ಡ್ಯಾಂ ಸೈಟ್‌ನ್ನು ಬದಲಾಯಿಸಿ ಅಲಮಟ್ಟಿ ಹಾಗೂ ನಾರಾಯಣಪುರ ಇವೆರಡು ಜಾಗದಲ್ಲೂ ಕಟ್ಟಬೇಕೆಂದು ಮಾಡಿದೆ ಮತ್ತು ಪವರನ್ನು ಜನರೇಟ್ ಮಾಡಬೇಕೆಂದೂ ಇದೆ.